# ಮತ್ತೆ ಮತ್ತೆ ಕಾಡುವ 'ಬೇಟೆ'ಗಾರ 'ಮಾಂಟೊ'





ಕತೆಗಾರ ಸಾದತ್ ಹಸನ್ ಮಾಂಟೊ ಮತ್ತು ಮಾಂಟೊ ಪಾತ್ರದಲ್ಲಿ ನವಾಜುದ್ದೀನ್ ಸಿದ್ದಿಕಿ

■ ದಿಲಾವರ್ ರಾಮದುರ್ಗ

ಸಾದತ್ ಹಸನ್ ಮಾಂಟೊ, 40ರ ದಶಕ ಮತ್ತು 50ರ ದಶಕದ ಆರಂಭ ಕಾಲವನ್ನು ಪ್ರಭಾವಿಸಿದ ಉಪಖಂಡದ ಅಪ್ರತಿಮ ಕತೆಗಾರ. ಉರ್ದು ಸಾಹಿತ್ಯ ಲೋಕದ ಸಮಕಾಲೀನ ಲೇಖಕರನ್ನು ತನ್ನ ವಿಭಿನ್ನ ಭಾಷೆ, ಶೈಲಿ ಮತ್ತು ವಸ್ತುವಿನ ಮೂಲಕ ಏಕಾಂಗಿಯಾಗಿ ಎದುರಿಸಿದ ಮಾಂಟೊ ಬಾಳಿದ್ದು ಕೇವಲ ನಲವತ್ತೆರಡು ವರ್ಷ.

ಖೋಲ್ ದೋ, ಥಂಡಾ ಘೋಶ್, ಸೌ ವಾಟ್ ಕಾ ಬಲ್ಬ್, ಕಾಲಾ ಶೆಲ್ವಾರ್, ದಸ್ ರುಪಯ್ಯಾ, ತೊಬತೇಕ್ ಸಿಂಗ್, ಯಹೂದಿ ಲಡಕೀ,.. ಮಾಂಟೊ ಬರೆದ ಅಪೂರ್ವ ಸಣ್ಣ ಕತೆಗಳು. ಅನನ್ಯ ಐದು ಕತೆಗಳನ್ನು ಆಯ್ದುಕೊಂಡು ನಟಿ ನಂದಿತಾ ದಾಸ್ 'ಮಾಂಟೊ' ಚಿತ್ರವಾಗಿಸಿದ್ದಾರೆ. ಇದೊಂದರ್ಥದಲ್ಲಿ ಬಯೋಪಿಕ್.

'ದಸ್ ರುಪಯ್ಯಾ' (ಹತ್ತು ರೂಪಾಯಿ) ಕತೆಯ ವೇಶ್ಯೆಯೊಬ್ಬಳ ಕಥನದೊಂದಿಗೆ ಸಿನಿಮಾ ಆರಂಭಗೊಳ್ಳುತ್ತದೆ. ಮಾಂಟೊ ಕತೆ ಒಂದು ವಿಘಟಿತ ಮನಸ್ಥಿತಿಯ ಲಕ್ಷಣವಾಗಿ ಸೆಳೆಯುವಂಥದು. ಕ್ರಮೇಣ ಇಂಥ ವಿಲಕ್ಷಣ ಪಾತ್ರಗಳು ಇದೂ  ಮನುಷ್ಯ ಜಗತ್ತಲ್ಲವೇ! ಎಂದು ಹೃದ್ಯವಾಗಿ ಹೇಳಲೆತ್ನಿಸಿದಂತೆನಿಸುತ್ತದೆ. ಮಾಂಟೊ ಜಗತ್ತಿನೊಳಕ್ಕೆ ಪ್ರವೇಶ ಪಡೆಯಲು ಇದಕ್ಕಿಂತ ಪ್ರೇರಣೆ ಬೇಕಿಲ್ಲ. ಇದರ ಮುಂದುವರಿದ ಭಾಗದಂತೆ 'ಸೌ ವಾಟ್ ಕಾ ಬಲ್ಬ್' ಕತೆಯ ಚಿತ್ರಣದಲ್ಲಿ ವೇಶ್ಯೆಯರು ಮತ್ತವರ ದಲ್ಲಾಳಿಗಳ ನಿರ್ಭಾವುಕ ನಡೆ ವಿಚಲಿತಗೊಳಿಸುತ್ತವೆ. ಪರೇಶ್ ರಾವಲ್ ಅವರಂಥ ನಟರು ಪುಟ್ಟದಾದ ದಲ್ಲಾಳಿ ಪಾತ್ರವನ್ನು ನೆನಪಲ್ಲುಳಿಯುವಂತೆ ಅಭಿನಯಿಸಿ ಮಾಂಟೊ ಪ್ರವೇಶಿಕೆಯನ್ನು ಅರ್ಥಪೂರ್ಣಗೊಳಿಸುತ್ತಾರೆ. ದೃಶ್ಯದಲ್ಲಿ ಕ್ಷಣವಾದರೂ ಕಣ್ತುಂಬ ನಿದ್ರಿಸುವ ಹಂಬಲದ ವೇಶ್ಯೆಯೊಬ್ಬಳ ಚಿತ್ರಣವಿದೆ. ಆಕೆಗೆ ಗಿರಾಕಿಗಳ ಆಗಮನ ಕಿರಿಕಿರಿ. ಆಕ್ರೋಶವನ್ನೆಲ್ಲ ದಲ್ಲಾಳಿಯ ಮೇಲೆ ಪ್ರಯೋಗಿಸಿ ಆತನ ಕೊಡವಿ ನಿದ್ರೆಗೆ ಜಾರಲೆತ್ನಿಸುವ ಅವಳ ಪರಿ ಮತ್ತು ಪ್ರತ್ಯಕ್ಷ ಸಾಕ್ಷಿಯಂತಿರುವ ಮಾಂಟೊ ಮನಸ್ಥಿತಿಯನ್ನು ಆ ಘಟನೆಗೆ ಸಂವಾದಿಯಾಗಿಸುವ ಯತ್ನ ಮನಮುಟ್ಟುವಂತಿದೆ.

ಮಾಂಟೊ ಬದುಕಿನ ಬಹುಪಾಲು ಸಮಯ ಕಳೆದಿದ್ದು ಮುಂಬೈನಲ್ಲಿ. ಸಿನಿಮಾ ಜಗತ್ತಿಗೆ ತೆರೆದುಕೊಂಡಾಗ ನಟ ಶ್ಯಾಂ ಪ್ರಸಾದ್, ಅಶೋಕ್ ಕುಮಾರ್, ನರ್ಗಿಸ್.. ಸಾಂಗತ್ಯ, ಸಾಮೀಪ್ಯ ಸಿಕ್ಕಿದ್ದು. ಜೊತೆಗೆ ಸೈಗಲ್ ಹಾಡು ಬಿಡದ ಸೆಳೆತ. ಬಾಂಬೇ ಟಾಕೀಸ್, ಫಿಲ್ಮಿಸ್ತಾನ್ ಸಿನಿಮಾ ಕಂಪನಿಗಳಲ್ಲಿ ನೌಕರಿ, ಹತ್ತಾರು ಸಿನಿಮಾಗಳಿಗೆ ಕತೆ, ಸಂಭಾಷಣೆ... ಸಿನಿಮಾ, ಸಿಗರೇಟ್ ಹೊಗೆ, ಶರಾಬು ನಶೆಯಲ್ಲಿ ಮಾಂಟೊ ಬದುಕು ಮಜದಲ್ಲೇ ಸಾಗುತ್ತದೆ.

ಅದೇ ಕಾಲಕ್ಕೆ ದೇಶ ವಿಭಜನೆಯ ಕರಾಳ ಛಾಯೆ ಆವರಿಸಿಕೊಳ್ಳುತ್ತದೆ. ತಕ್ಷಣದ ದಂಗೆಗಳನ್ನು ನಿಯಂತ್ರಿಸಲಾಗದ ವ್ಯವಸ್ಥೆಯಿಂದ ಹಿಂದೂ–ಮುಸ್ಲಿಂ–ಸಿಖ್ ಗಲಾಟೆಗಳು. ಲಾಹೋರ್ ಮತ್ತು ದಿಲ್ಲಿ ನಡುವೆ ಲಕ್ಷಾಂತರ ಹೆಣಗಳ ಪರಸ್ಪರ ರವಾನೆ. ಇಂಥ ವಿದ್ಯಮಾನಗಳಿಂದ ಮಾಂಟೊ ಘಾಸಿಗೊಳ್ಳುವಂತಾಗುತ್ತದೆ. ಚಿತ್ರನಟ ಶ್ಯಾಂ ಮತ್ತು ಅಶೋಕ್ ಕುಮಾರ್ ಜೊತೆ ಪ್ರತ್ಯೇಕವಾಗಿ ಕಾರಿನಲ್ಲಿ ಪಯಣಿಸುವಾಗ ಮಾಂಟೊ ಎರಡು ಹಿಂಸಾ ಘಟನೆಗಳಿಗೆ ಎದುರಾಗುತ್ತಾನೆ. ಅಶೋಕ್‌ಕುಮಾರ್ ಕಾರು ತಡೆಯುವ ಹಿಂಸಾನಿರತ ಮುಸ್ಲಿಮರ ಗುಂಪಿನಲ್ಲಿ ಆತನ ಸಿನಿಮಾ ಅಭಿಮಾನಿಗಳು! ಅವರನ್ನು ಪಾರು ಮಾಡುವಲ್ಲಿ ಅಭಿಮಾನ ನೆರವಾಗುತ್ತದೆ. ಅಶೋಕ್